ರುದ್ರಮುನಿಯ ತಲಾಶಿನಲ್ಲಿ ಬಂದಿರುವುದಾಗಿ ಹೇಳಿದಾಗ, ನಿರ್ವಿಕಾರವಾಗಿ ನಮ್ಮನ್ನು ಒಳಕ್ಕೆ ಬರಹೇಳಿದ.

"ನಿಂಗಳ್ ಬಂದಿದ್ದು ಒಳ್ಳೆದಾಯ್ತು. ನಿಮಕ್ ಅವ್ನ ಅಡ್ರೆಸ್ ಸಿಕ್ರೆ ನಮಕ್ಕೂ ಹೇಳಿ. ಅವ್ನು ನನ್ಗೆ ಪಣಂ ಕೊಡೋಕ್ ಬಾಕಿಯುಂಡು!"

ಅಷ್ಟು ಹೇಳಿ, ಆತ ತನ್ನ ಷರತ್ತಿನ ಬಗ್ಗೆ ತಿಳಿಸಿದ. ಆತನ ಭಾಷೆಯದು ಮಲಯಾಳಿಯೋ, ಕೊಡವತಕ್ಕೋ, ಕನ್ನಡ ಅಥವಾ ಇನ್ನಾವುದೋ ಎಂದು ನನಗೆ ಗೊಂದಲವುಂಟಾಯಿತು.

"ರುದ್ರಮುನಿ ಹತ್ರ ನಿಮ್ಗೆ ಕೊಡೋಕೆ ಹಣ ಎಲ್ಲುಂಟು? ಅವ್ನೇ ಸಾಲದಲ್ಲಿ ಮುಳುಗಿದ್ದ ಅಂತ ಕೇಳ್ದೆ."

ಕರಮಚಂದನ ಪ್ರತಿಕ್ರಿಯೆಗೆ ಆತ ದೊಡ್ಡದಾಗಿ ನಕ್ಕ.

"ನಿಮಕ್ ಅವ್ನ ಪೂರಾ ಸಂಗ್ತಿ ಗೊಂತ್ತಿಲ್ಲ. ಅವ್ನಿಗೆ ಕುಟ್ಟಯ್ಯ ಪಣಂ ಕೊಡ್ತಾ ಇರುಕ್ಕು! ಸೀಕ್ರೆಟಿನಲ್ಲಿ!! ರುದ್ರಮುನಿಯೇ ಹೇಳಿತ್ತು... ಕುಟ್ಟಯ್ಯ ಯಾವ್ದೋ ಪೊಣ್ ಜೊತೆ ಇಷ್ಕ್ ಮಾಡ್ತಿದ್ದ ಫೋಟೊ ತೆಗೆದು, ಅವನ್ನ ಬ್ಲಾಕ್‌ಮೇಲ್ ಮಾಡ್ತಿತ್ತಂತೆ! ಅದಕ್ ಹೆದ್ರಿ, ಸೀಕ್ರೆಟ್ಟಾಗಿ ಕುಟ್ಟಯ್ಯ ಕಾಸು ಮಡಗ್ತಿತ್ತಂತೆ... ಪಿಂಞ್... ಕುಟ್ಟಯ್ಯಗೆ ರುದ್ರಮುನಿಯೇ ಬ್ಲಾಕ್‌ಮೇಲ್ ಮಾಡತ್ ಅಂತ ಗೊಂತ್ತಿಲ್ಲ..."

ಕುಟ್ಟಯ್ಯನ ಅನೈತಿಕ ಸಂಬಂಧದ ಫೋಟೊ ಹಿಡಿದು, ರುದ್ರಮುನಿ ಗುಟ್ಟಾಗಿ ಬ್ಲಾಕ್‌ಮೇಲ್ ಮಾಡ್ತಿದ್ದ! ಏಡುಕೊಂಡಲುವಿನ ಮಾತು ಎಷ್ಟು ನಂಬಲರ್ಹ?

"ನಿಂಗ ಡ್ರಿಂಕ್ಸ್ ತಗೊಳ್ಳದೋ?"

ನಮ್ಮ ಪ್ರತಿಕ್ರಿಯೆಗೂ ಕಾಯದೆ ಏಡುಕೊಂಡಲು ಫ್ರಿಡ್ಜಿನಿಂದ ಬಾಟಲು ಹೊರತೆಗೆದು ಮೇಜಿನ ಮೇಲಿರಿಸಿದ. ಕರಮಚಂದ ವಿಸ್ಕಿ ತಟ್ಟೆಗೆ ತುಂಬಿ, ಸೋಡಾ ಸುರುವಿಕೊಂಡ. ನಾನೂ ಆತನಿಗೆ ಸಾಥ್ ನೀಡಿದೆ. ಗೋಡೆಯಲ್ಲಿ ಕೆಲವಾರು ಹಳೆಯ ಫೋಟೊಗಳಿದ್ದವು. ಮಿಲಿಟರಿ ಸಮವಸ್ತ್ರದಲ್ಲಿದ್ದ ಏಡುಕೊಂಡಲುವಿನ ಮಸುಕಾದ ಭಾವಚಿತ್ರಗಳು. ಗಾಜಿನ ಷೋಕೇಸಿನಲ್ಲಿ ಅಂದವಾಗಿ ಜೋಡಿಸಿದ ಮೆಡಲ್ಲುಗಳು!

"ಅದ್ ಯುದ್ಧ ಆಯಿನ ಸಂದರ್ಭ ಸಿಕ್ಕದ್ ಮೆಡಲ್ಸ್... ಬ್ರೇವರಿ ಅವಾರ್ಡ್ಸ್!" ನನ್ನ ಗಮನ ಅತ್ತ ತಿರುಗಿದ್ದನ್ನು ಕಂಡು, ಏಡುಕೊಂಡಲು ಹೆಮ್ಮೆಯ ಗಹಗಹ ಹಾಕಿದ.

"ನೀವು ಮನೆಲಿ ಯಾರೆಲ್ಲ ಇದ್ದೀರಿ?"

"ಇರುಕ್ಕ್ ಮೂಂದ್ ಜನಂ... ನನ್ ಪೊಣ್ಣ್ ಸೆಲ್ವಿ. ಅವು ಸೋಮಾರಿ. ಎಕ್ಕೊಲು ನಿದ್ರಂ ಮಾಡ್ತ್.. ಅದ್ಕೆ ಅಟ್ಟದ್ ಮಾಡೋಕೆ ಮತ್ತು ತೋಟದ್ ಉದ್ಯೋಗಂಗೆ ನಲ್ಲತಂಬಿ ಇರುಕ್ಕು. ಯಾರ್ ಜೊತೆ ನಾ ತಕ್ಕ್ ಪರಿ... ಬೋರ್ ಆಗುತ್ತೇ ಅಂತ ಕುಡಿಯೋಕೆ ಜನ ತರಿಸ್ತೆ. ಟೈಂ ಪಾಸ್ ಆಗ್ಬೇಕಲ್ಲ... ಪಣಂ ವೆಚ್ಚಂ ಮಾಡ್ತ್.. ಎಂಗಳ್ ಮಕ್ಕಳ್ ಇಲ್ಲಾ. ಪಣಂ ಉಳ್ಸಿ ಏನ್ ಮಾಡಾದ್?"

"ನೀವು ಸಂಗಾತಿಯಾಗಿ ಆರಿಸಿಕೊಳ್ಳೋದು ಬರೀ ಬಡವರನ್ನು ಮಾತ್ರ, ಅಲ್ವೆ? ಖಾಲಿ ಜೇಬಿನ ಮನುಷ್ಯರನ್ನು! ನಿಮ್ಮ ಶಿಷ್ಯ ನಲ್ಲತಂಬಿ ರುದ್ರಮುನಿಯ ಬಗ್ಗೆ ವಿಚಾರಿಸಿದ್ದನ್ನ ಎಸ್ಟೇಟಿನ ಕೆಲ್ಸಗಾರರು ಹೇಳಿದ್ರು. ಬಡವರ ಹತ್ರ ಪೈಸಾ ವಸೂಲು ಮಾಡೋಕೆ ಹೇಗ್ ಸಾಧ್ಯ?"

"ಕಂತಲ್ಲಿ ವಸೂಲ್ ಮಾಡೋದ್! ನಲ್ಲತಂಬಿ ದಂಡ್ ಪೆಟ್ಟ್ ಕೊಡ್ಕ್ ಕಾಸು ಕೊಡ್ತರ್. ಬಡವರಾದ್ರೂ ಕೆಲ್ಸ ಮಾಡ್ತಾರೆ. ಪಗಾರಂ ಎಷ್ಟ್ ಬರುತ್ ಅಂತ ವಿಚಾರ್ಸಿಯೇ, ಕುಡಿಯೋಕೆ